ಕರ್ನಾಟಕ ಸರ್ಕಾರ

ಸಂಖ್ಯೆ:ಆಸಾನಿ/06/ಆಡಳಿತ-5/2021-22
4950-5049

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-1, ದಿನಾಂಕ: 03.06.2022.

## ಅಧಿಕೃತ ಜ್ಞಾಪನ

ವಿಷಯ: ದಿನಾಂಕ: 01.01.2022 ರಲ್ಲಿದ್ದಂತೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಗುಂಪು'ಡಿ' ವೃಂದದ ಸಾಮಾನ್ಯ, ಉಳಿಕೆ ಮೂಲ ವೃಂದ (Residual Cadre) ಮತ್ತು ರಾಜ್ಯ ವ್ಯಾಪಿ ಸ್ಥಳೀಯ ವೃಂದದ (Statewide local cadre) ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತು.

ಉಲ್ಲೇಖ:
1. ನಿರ್ದೇಶನಾಲಯದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಆಸಾಂನಿ/06/ಆಡಳಿತ-5/2021-22, ದಿನಾಂಕ: 13.04.2022ರಲ್ಲಿ ಹೊರಡಿಸಲಾದ ಗುಂಪು"ಡಿ" ನೌಕರರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿ.
2. ಸರ್ಕಾರದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:ಸಿಆಸುಇ/106/ಸೆನೆನಿ 2021, ದಿನಾಂಕ: 10.12.2021.

<<<<>>>>

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರ ಅಧಿಕೃತ ಜ್ಞಾಪನದಲ್ಲಿ ದಿನಾಂಕ: 01.01.2019ರಲ್ಲಿದ್ದಂತೆ ಗುಂಪು 'ಡಿ' ನೌಕರರ ವೃಂದದ ಸಾಮಾನ್ಯ (General)/ ಉಳಿಕೆ ಮೂಲ ವೃಂದದ (Residual) ಮತ್ತು ರಾಜ್ಯ ವ್ಯಾಪಿ ಸ್ಥಳೀಯ (State Wide Local Cadre) ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಹೊರಡಿಸಲಾಗಿತ್ತು. ಸದರಿ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ "ಆಕ್ಷೇಪಣೆಗಳೇನಾದರೂ" ಇದ್ದಲ್ಲಿ ನಿರ್ಧಿಷ್ಟವಾದ, ಸೂಕ್ತವಾದ ಹಾಗೂ ನಂಬಲಾರ್ಹವಾದ ದಾಖಲೆಗಳೊಂದಿಗೆ ದಿನಾಂಕ : 10.05.2022ರ ಒಳಗಾಗಿ ಆಕ್ಷೇಪಣೆಗಳನ್ನು ಸಂಬಂಧಿಸಿದ ಮೇಲಾಧಿಕಾರಿಗಳ ಮುಖಾಂತರ ಸಲ್ಲಿಸುವಂತೆ ಸೂಚಿಸಲಾಗಿತ್ತು.

ಸದರಿ ವೃಂದದಲ್ಲಿ ಯಾವುದೇ ನೌಕರರಿಂದ ಆಕ್ಷೇಪಣೆಗಳು ನಿರ್ದೇಶನಾಲಯದಲ್ಲಿ ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ ಗುಂಪು 'ಡಿ' ನೌಕರರ ವೃಂದದ ಸಾಮಾನ್ಯ (General)/ ಉಳಿಕೆ ಮೂಲ ವೃಂದದ (Residual) ಮತ್ತು ರಾಜ್ಯ ವ್ಯಾಪಿ ಸ್ಥಳೀಯ (State Wide Local Cadre) ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಈ ಜ್ಞಾಪನದೊಂದಿಗೆ ಲಗತ್ತಿಸಲಾದ ಅನುಬಂಧ-2, 2(ಎ) ಮತ್ತು 2(ಬಿ)ಗಳಲ್ಲಿ ಹೊರಡಿಸಲಾಗಿದೆ.

ಗುಂಪು 'ಡಿ' ನೌಕರರ ಅಂತಿಮ ಜೇಷ್ಠತಾ ಪಟ್ಟಿಯು ನ್ಯಾಯಾಲಯದಿಂದ ನೀಡುವ ತೀರ್ಪುಗಳಿಗೆ ಹಾಗೂ ಸರ್ಕಾರದಿಂದ ಹೊರಡಿಸಲಾಗುವ ಆದೇಶಗಳ ಷರತ್ತಿಗೆ ಒಳಪಟ್ಟಿರುತ್ತದೆ. ಸದರಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಈ ನಿರ್ದೇಶನಾಲಯದ ವೆಬ್‌ಸೈಟ್- www.des.kar.nic.inರಲ್ಲಿ ಪ್ರಕಟಿಸಲಾಗಿದೆ.

(ಮಾಧುರಾಮ್ ಎಸ್) 7/6
ನಿರ್ದೇಶಕರು

ಗೆ,
ಸಂಬಂಧಪಟ್ಟ ಎಲ್ಲಾ ನೌಕರರುಗಳಿಗೆ

ಪ್ರತಿಯನ್ನು:
1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ , ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು ಇವರ ಮಾಹಿತಿಗಾಗಿ.

2. ಕೇಂದ್ರ ಕಚೇರಿಯ ಎಲ್ಲಾ ಜಂಟಿ ನಿರ್ದೇಶಕರಿಗಳಿಗೆ ಮಾಹಿತಿಗಾಗಿ.
3. ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಗೆ ಇವರ ಮಾಹಿತಿಗಾಗಿ-ಸದರಿ ಜ್ಯೇಷ್ಠತಾ ಪಟ್ಟಿಯ ಪ್ರತಿಯನ್ನು ನಿಮ್ಮ ಕಚೇರಿ/ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗುಂಪು"ಡಿ" ನೌಕರರಿಗೆ ತಲುಪಿಸಿ ಸ್ವೀಕೃತಿಯನ್ನು ನಿರ್ದೇಶನಾಲಯಕ್ಕೆ ತಪ್ಪದೇ ಕಳುಹಿಸಲು ಸೂಚಿಸಿದೆ.
4. ನಿರ್ದೇಶಕರ ಆಪ್ತ ಶಾಖೆಗೆ.
5. ಪತ್ರಾಂಕಿತ ವ್ಯವಸ್ಥಾಪಕರು, ಲೆಕ್ಕ ಮತ್ತು ಆಡಳಿತ ವಿಭಾಗ, ಕೇಂದ್ರ ಕಚೇರಿ, ಬೆಂಗಳೂರು.
6. ಕಚೇರಿ ಪ್ರತಿ.